ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.
ಸಿ.ಸಿ. ಸಂಖ್ಯೆಃ 235/2023

| | | |
|---|---|---|
| ಹೆಸರುಃ | ಡಾ. ಶೃತಿ | ಪಿಡಬ್ಲ್ಯೂ -10 ಸಿಡಬ್ಲ್ಯೂ -07 |
| ಗಂಡನ | ಗೋವಿಂದರಾಜು | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾದ ದಿನಾಂಕಃ 21.04.2026 |
| ವಯಸ್ಸುಃ | 34 ವರ್ಷ | |
| ಕೆಲಸಃ | ವೈದ್ಯ | |
| ವಾಸಸ್ಥಳಃ | ಚೆಲುವಾಂಬ ಆಸ್ಪತ್ರೆ ಮೈಸೂರು. | |

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ನಾನು 2021 ರಿಂದ ಆಗಸ್ಟ್ 2023ರವರೆಗೆ ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 31.01.2023 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ತನ್ನ ಮನೆಯ ಹತ್ತಿರ ಪೀಟರ್ ಎಂಬುವವರಿಂದ ಚಾಕುವಿನಿಂದ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಾಸಾ-1 ರವರು ದಿಃ 01.02.2023 ರಂದು ಬೆಳಗಿನ ಜಾವ 12.10 ಗಂಟೆ ಸಮಯದಲ್ಲಿ ನನ್ನ ಮುಂದೆ ಚಿಕಿತ್ಸೆಗೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಬಲಗೈನ ಅಂಗೈನ ಮೇಲ್ಭಾಗದಲ್ಲಿ 4x 1 cm ಕುಯ್ದು ಗಾಯ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಆ ಬಗ್ಗೆ ಗಾಯ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡುತ್ತಿದ್ದು,ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿಃ 31.01.2023 ರಂದು ರಾತ್ರಿ 10.00 ಗಂಟೆಯ ಸಮಯದಲ್ಲಿ ತನ್ನ ಮನೆಯ ಹತ್ತಿರ ಪೀಟರ್ ಎಂಬುವವರಿಂದ ಕೈಯಿಂದ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಾಸಾ-2 ರವರು ದಿಃ 01.02.2023 ರಂದು ಬೆಳಗಿನ ಜಾವ

12.15 ಗಂಟೆ ಸಮಯದಲ್ಲಿ ನನ್ನ ಮುಂದೆ ಚಿಕಿತ್ಸೆಗೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಬಲಮುಂಗೈನ ಮೇಲೆ 3x0.01 cm ಅಳತೆಯ ತರಚಿದ ಗಾಯ,
2. ಬೆನ್ನು ಮತ್ತು ಎದೆಯ ಭಾಗದಲ್ಲಿ ನೋವಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ಗಾಯ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡುತ್ತಿದ್ದು,ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಮು.ಮಾ–3 ರ ಪೆನ್ನಿನಿಂದ ಒಬ್ಬ ವ್ಯಕ್ತಿಗೆ ಬಲವಾಗಿ ಹಲ್ಲೆ ಮಾಡಿದರೆ ನಿಪಿ–4 ರಲ್ಲಿ ಕಾಣಿಸಿದ ಗಾಯವಾಗುವ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಎನ್ ವಕೀಲರಿಂದಃ**

ಯಾವುದೇ ಒಬ್ಬ ವ್ಯಕ್ತಿ ಆಸ್ಪತ್ರೆಗೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಾಗ ಸದರಿ ವಿಷಯವನ್ನು ಹತ್ತಿರ ಪೋಲೀಸ್ ಠಾಣೆಗೆ ಮಾಹಿತಿ ನೀಡುತ್ತೇವೆ. ಚಾಸಾ–1 ಮತ್ತು 2 ರವರು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆದಿಲ್ಲ. ಹತ್ತಿರದ ಪೋಲೀಸ್ ಠಾಣೆಗೆ ಮಾಹಿತಿ ನೀಡಿದ್ದಿರಾ ಎಂದರೆ ನೀಡಿದ್ದೇನೆ. ನಂತರ ಪೋಲಿಸರು ಆಸ್ಪತ್ರೆಗೆ ಬಂದಿದ್ದಾರೆಯೇ ಎಂದರೆ ಗೊತ್ತಿಲ್ಲ. ಚಾಸಾ–1 ಮತ್ತು 2 ರವರು ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆ ಗೆ ದಾಖಲಾದ ಬಗ್ಗೆ ಹತ್ತಿರದ ಪೋಲೀಸ್ ಠಾಣೆಗೆ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ–4 ಮತ್ತು 5ರ ಗಾಯದ ಪ್ರಮಾಣ ಪತ್ರಗಳನ್ನು ನೀಡುವಂತೆ ಠಾಣೆಯಿಂದ ಮನವಿ ಕಳುಹಿಸಿದ್ದಾರೆಯೇ ಎಂದರೆ ಕಳುಹಿಸಿದ್ದರು. ಯಾವ ದಿನಾಂಕದಂದು ಮನವಿ ಸ್ವೀಕರಿಸಿದ್ದಿರಿ ಎಂದರೆ ನಿಪಿ–4 ಮತ್ತು 5 ರಲ್ಲಿ ನಮೂದಿಸಿಲ್ಲ. ಚಾಸಾ–1 ರವರ ಗಾಯದ ಪ್ರಮಾಣ ಪತ್ರವನ್ನು ದಿಃ 23.02.2023 ರಂದು ನೀಡಿದ್ದೇನೆ. ಚಾಸಾ–2 ರವರ ಗಾಯದ ಪ್ರಮಾಣ ಪತ್ರವನ್ನು ದಿಃ 27.02.2023 ರಂದು ನೀಡಿದ್ದೇನೆ. ಠಾಣೆಯಿಂದ ಮನವಿ ಬಂದ ನಂತರವೇ ಗಾಯದ ಪ್ರಮಾಣ ಪತ್ರಗಳನ್ನು ನೀಡುತ್ತೇವೆ. ಗಾಯದ ಪ್ರಮಾಣ ಪತ್ರಗಳಿಗೆ ಮೊಹರು ಹಾಕಿ ನಂತರ ಸಹಿ

ಮಾಡುತ್ತೇವೆ. ಠಾಣೆಯಿಂದ ಚಾಸಾ–2 ರವರ ಬಗ್ಗೆ ಬಂದ ಮನವಿಯನ್ನು ದಿಃ 27.02.2023 ರಂದು ನಾನೇ ಸ್ವೀಕರಿಸಿದ್ದೇನೆ. ಚಾಸಾ–1ರವರ ಗಾಯದ ಪ್ರಮಾಣ ಪತ್ರ ನೀಡುವಂತೆ ತನಿಖಾಧಿಕಾರಿ ಮನವಿ ಕೊಟ್ಟಿಲ್ಲ ಎಂದರೆ ಕೊಟ್ಟಿದ್ದರು. ನನಗೆ ತನಿಖಾಧಿಕಾರಿಯಿಂದ ಯಾವುದೇ ಮನವಿ ಬಾರದೇ ಇದ್ದರೂ ಸಹ ಚಾಸಾ–1 ಮತ್ತು 2 ರವರೊಂದಿಗೆ ಶಾಮಿಲಾಗಿ ದಿಃ 23.02.2023 ರಂದು ನಿಪಿ–4 ಮತ್ತು 5 ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಇಂಗ್ಲಿಷ್ ನಲ್ಲಿ ಸಹಿ ಮಾಡುತ್ತೇನೆ. ನಿಪಿ–5(ಎ) ಕೆಳಗೆ ಕನ್ನಡದಲ್ಲಿ ಬರೆದಿರುವುದು ನನ್ನ ಸಹಿ ಅಲ್ಲ. ಅದು ಕೇವಲ ಹೆಸರು ಬರೆಯಲಾಗಿದೆ. ನಿಪಿ–5(ಎ) ಸಹಿ ಮಾಡುವಾಗ ಕನ್ನಡದಲ್ಲಿ ಬರೆದ ಹೆಸರನ್ನು ಬರೆಯಲಾಗಿತ್ತೆ ಎಂದರೆ ನೆನಪಿಲ್ಲ. ಗಾಯಾಳುಗಳು ನೀಡಿದ ಮಾಹಿತಿಯ ಪ್ರಕಾರ ಗಾಯದ ಪ್ರಮಾಣ ಪತ್ರದಲ್ಲಿ ಬರೆಯಲಾಗುತ್ತದೆ. ಚಾಸಾ–1ರವರ ಜೊತೆ ಚಾಸಾ–4 ಮತ್ತು ಥಾಮಸ್ ಎಂಬುವವರು ಬಂದಿದ್ದರ. ಚಾಸಾ–2 ರವರ ಜೊತೆ ಥಾಮಸ್ ಬಂದಿದ್ದರು. ಅದನ್ನು ಗಾಯದ ಪ್ರಮಾಣ ಪತ್ರದಲ್ಲಿ ಬರೆಯಲು ತೊಂದರೆ ಇತ್ತೇ ಎಂದರೆ ಇಲ್ಲ. ಮು.ಮಾ–3 ಚಾಕು ಅಲ್ಲ. ಮು.ವಮಾ–3ರ ಪೆನ್ನಿನಿಂದ ಹಲ್ಲೆ ಮಾಡಿದರೆ ನಿಪಿ–4ರಲ್ಲಿ ಕಾಣಿಸಿದ ಗಾಯ ಆಗುವ ಸಾಧ್ಯತೆ ಇಲ್ಲ ಎಂದರೆ ಬಲವಾಗಿ ಚುಚ್ಚಿದರೆ ಅಂತಹ ಗಾಯವಾಗುವ ಸಾಧ್ಯತೆ ಇದೆ. ಅಂತಹ ಗಾಯ ಆಗದೇ ಇದ್ದರೂ ಸಹ ಚಾಸಾ–1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಜಿನ ಬಳೆಯನ್ನು ಜೋರಾಗಿ ಎಳೆದು ತುಂಡಾದರೆ ನಿಪಿ–4 ರಲ್ಲಿ ಕಾಣಿಸಿದ ಗಾಯಗಳು ಆಗುವ ಸಾಧ್ಯತೆ ಇದೆ. ನಿಪಿ–4ರಲ್ಲಿ ಕಾಣಿಸಿದ ಗಾಯವಾದರೆ ಒಳರೋಗಿಯಾಗಿ ಚಿಕಿತ್ಸೆ ಪಡೆಯಬೇಕಾದ ಅವಶ್ಯಕತೆ ಇರುತ್ತದೆ ಎಂದರೆ ಇಲ್ಲ. ತುಂಬ ರಕ್ತಸ್ರಾವವಾಗಿದ್ದರೆ ಮಾತ್ರ ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಅವಶ್ಯಕತೆ ಇದೆ. ನಿಪಿ–5 ರಲ್ಲಿ ಆಸ್ಪತ್ರೆಯ ಮೊಹರು ಇಲ್ಲ ಎಂದರೆ ಸರಿ. ಗಾಯಾಳುವಿನ ಮಾತು ಕೇಳಿ ನಿಪಿ–5 ಅನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ಚಾಸಾ–1 ಮತ್ತು 2 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಿಂದ ದಿಃ 16.01.2023ರಂದು ಮನವಿ ಬಂದಿದೆ ಎಂದರೆ ಅಂತಹ ಮನವಿಯನ್ನು ನಮ್ಮ ಕಚೇರಿಯಲ್ಲಿ ಸ್ವೀಕರಿಸಲಾಗುತ್ತದೆ. ನಿಪಿ–5 ನ್ನುನಾನು ನೀಡಿದ ದಿನಾಂಕ 17.02.2023 ಎಂದರೆ ಸರಿಯಲ್ಲ. ದಿಃ 27.02.2023 ಆಗಿದೆ. ನಮ್ಮ ಆಸ್ಪತ್ರೆಗೆ ಬರುವ ಎಲ್ಲಾ

ಹೊರರೋಗಿಗಳ ಬಗ್ಗೆ ಡೈರಿಯಲ್ಲಿ ನಮೂದಿಸುವುದಿಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ತನಿಖಾಧಿಕಾರಿಯ ಮತ್ತು ಗಾಯಾಳುಗಳ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ರವರಿಗೆ ಬೆನ್ನುಮತ್ತು ಎದೆಯ ಭಾಗದಲ್ಲಿ ನೋವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುಗಳಿಂದ ಸುಳ್ಳು ಮಾಹಿತಿಯನ್ನು ಪಡೆದು ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.